**ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ**

ದಿನಾಂಕ : 20–01–2018

**ಪ್ರಕಟಣ ವಿಭಾಗ**

## ಪರಿಸರ ಮಾಲಿನ್ಯದಿಂದ ಸರ್ವ ವಿನಾಶ – ಪ್ರೊ. ಎಂ.ಪಿ. ನಟರಾಜ್

## ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ವಚ್ಚತೆಯ ಮಹತ್ವದ ಅರಿವು ಕಾರ್ಯಕ್ರಮ

**ಕೊಳ್ಳೇಗಾಲ 20–01–2018 :** ಸ್ವಚ್ಛತೆ ಎಂದರೆ ಕ್ಷಣಮಾತ್ರವಾಗಬಾರದು. ನಾವು ಸ್ವಚ್ಚವಾಗಿದ್ದರೆ ಸಾಲದು, ಜಗತ್ತಿನಾದ್ಯಂತ ಪ್ರತಿಯೊಬ್ಬರು ಶುಚಿತ್ವಕ್ಕೆ ತುಂಬು ಮನಸ್ಸಿನಿಂದ ಗಮನಕೊಟ್ಟು ವಿಶೇಷವಾಗಿ ಮಕ್ಕಳಲ್ಲಿ ಹಾಗೂ ವಿದ್ಯಾರ್ಥಿಗಳಲ್ಲಿ ಸ್ವಚ್ಚತೆಯ ಮಹತ್ವದ ಅರಿವು ಮೂಡಿಸಬೇಕು ಎಂದು ನಿವೃತ್ತ ಪ್ರಾಚಾರ್ಯರು ಪ್ರೊ ಎಂ. ಪಿ. ನಟರಾಜುರವರು ಅಭಿಮತ ವ್ಯಕ್ತಪಡಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾ.ಸೇ.ಯೋಜನೆ ಹಾಗೂ ಜೆಎಸ್‌ಎಸ್ ಶುಶ್ರೂಷೆ ಶಾಲೆ ವತಿಯಿಂದ ಆಯೋಜಿಸಲಾಗಿದ್ದ ಸ್ವಚ್ಛತಾ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪರಿಸರ ಮಾಲಿನ್ಯವನ್ನು ನಾವು ಪಂಚಭೂತ ಮಾಲಿನ್ಯ ಅನ್ಯಬಹುದಾದ ವಾಯುಮಾಲಿನ್ಯ, ಜಲ ಮಾಲಿನ್ಯ, ಆಹಾರ ಮಾಲಿನ್ಯ, ಶಬ್ದ ಮಾಲಿನ್ಯ ಮತ್ತು ಮನಸ್ಸು ಮಾಲಿನ್ಯ ಎನ್ನಬಹುದು. ಇಂದು ಪರಿಸರ ಮಾಲಿನ್ಯ ಮಾತ್ರವಲ್ಲದೆ ಮನಸ್ಸಿನ ಮಾಲಿನ್ಯವನ್ನು ಕಡಿಮೆ ಮಾಡಿಕೊಳ್ಳಬೇಕಾಗಿದೆ. ಇದನ್ನೇ ಬಸವಣ್ಣನವರು **ಅಂತರಂಗ ಶುದ್ಧಿ ಮತ್ತು ಬಹಿರಂಗ ಶುದ್ಧಿ** ಎಂದರು. ನಮಗಾಗಿ ಅಲ್ಲದೆ ನಮ್ಮ ಮುಂದಿನ ಪೀಳಿಗೆಗಾಗಿ ನಾವೆಲ್ಲ ನಮ್ಮ ನಡೆ, ನುಡಿ, ತನು, ಮನ, ಭಾವ ಶುಚಿಗೊಳಿಸಿ ಪಂಚಭೂತಗಳಾದ ಭೂಮಿ, ಜಲ, ವಾಯು, ಆಕಾಶ ಹಾಗೂ ಅಗ್ನಿಗಳ ಮಾಲಿನ್ಯವನ್ನು ತಡೆಗಟ್ಟಿ ಸೃಷ್ಠಿಕರ್ತನ ನಿಸರ್ಗವನ್ನು ಉಳಿಸುವುದು ಅನಿವಾರ್ಯ ಎಂದು ಕರೆ ನೀಡಿದರು.

ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಎಂ ಪ್ರಭು, ರಾ.ಸೇ.ಯೋ ಕಾರ್ಯಕ್ರಮಾಧಿಕಾರಿ ಶ್ರೀಮತಿ ಎ ಎಸ್ ಸ್ಮಿತಾ, ಸ್ವಚ್ಛತಾ ಸಮಿತಿ ಸಂಚಾಲಕರಾದ ಶ್ರೀ ಬಿ. ಮಂಜುನಾಥ್, ಶ್ರೀ ಹೇಮೇಶ, ಹಾಗೂ ವಿದ್ಯಾರ್ಥಿಗಳು ಕಾಲೇಜಿನ ಹೊರ ಆವರಣವನ್ನು ಸ್ವಚ್ಛಗೊಳಿಸಿದರು.





